ಇವನಂತಾಗಿ ಬಿಡುತ್ತದೆ ಎಂದು ಗಾಢವಾಗಿ ಅನ್ನಿಸಿ, #hangprofRK ಅನ್ನೋ ಆನ್ಲೈನ್ ಅಭಿಯಾನಕ್ಕೆ ಚಾಲನೆ ನೀಡಿತು. ಜಾಸ್ತಿ ಓದಿದರೆ ಹೀಗೆ ಆಗಿ ಹುಚ್ಚು ಹಿಡಿಯುತ್ತೆ. ಇಂಥಾ ಅಪಾಯಕಾರಿ ಮನಸ್ಥಿತಿಯವರು ವಿಶ್ವವಿದ್ಯಾನಿಲಯದಲ್ಲಿದ್ದರೆ ನಮ್ಮ ಮಕ್ಕಳ ಭವಿಷ್ಯವೇನಾಗಬೇಕು ಎಂದೆಲ್ಲ ಕಳವಳ ವ್ಯಕ್ತಪಡಿಸಿದ ಈ ಜನ ನಮ್ಮ ಅಧ್ಯಕ್ಷರಿಗೆ ಪತ್ರ ಬರೆದು ಬೇರೆ ಒಂದು ಆಯೋಗವನ್ನೇ ರಚಿಸಿ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ದುಡಿಯುತ್ತಿರುವ ಪ್ರಾಧ್ಯಾಪಕರ ಮಾನಸಿಕ ಸ್ವಾಸ್ಥ್ಯವನ್ನು ಪರೀಕ್ಷಿಸಲು ಸಹಾಯವಾಗುವಂತಹ Questionnaire ಒಂದನ್ನು ರೂಪಿಸತೊಡಗಿದರು. ಹಾಗೇ ಇದೇ ಜನ ಇದೇ ಪ್ರೊಫೆಸರ್ ಹಿಂದೆ ಕೊಟ್ಟ lecturing series footage ಹುಡುಕಿ ತೆಗೆದು ಶ್ರೀಯುತರು ಒಂದು ಉಪನ್ಯಾಸ ಸರಣಿಯಲ್ಲಿ 'ಜಿಹಾದ್ ಎಂದರೆ ನಿಜಕ್ಕೂ ಕೆಟ್ಟ ಪದವಲ್ಲ. ಹಿಂದೆ ಸೂಫಿ ಸಂತರು ದೇಹದ ಕಾಮನೆಗಳ ವಿರುದ್ಧ ಮನಸ್ಸಿನಲ್ಲಿ ಯುದ್ಧ ಸಾರಿ ಇಂದ್ರಿಯಗಳನ್ನು ನಿಗ್ರಹದಲ್ಲಿಟ್ಟು ಆತ್ಮವನ್ನು ಪರಮಾತ್ಮನೆಡೆ ಒಡ್ಡುವ ಕ್ರಿಯೆಗೆ ಜಿಹಾದ್ ಅನ್ನೋ ಹೆಸರಿಟ್ಟಿದ್ದರು' ಎಂದಿದ್ದ ತುಣುಕನ್ನು ಎಲ್ಲೆಡೆ ಹಬ್ಬಿಸುತ್ತಾ ಈತ ನಿಜಕ್ಕೂ ಓರ್ವ ಪಾಕಿಸ್ತಾನಿ ಏಜೆಂಟೇ ಎಂದು JUDGEMENT ಹೊರಡಿಸಿದರು. ಆದರೆ ಈ ಬದಿಯಲ್ಲಿದ್ದ, ನಮ್ಮ ಪ್ರೊಫೆಸರ್‌ನ ಹಳೆಯ ಹಿಂಬಾಲಕರು (ಈಗ ಹೊಸ ಶಿರಚ್ಛೇದಕರು) 'ಈ ಅಯೋಗ್ಯ ತನ್ನ ತಲೆ ನೆಟ್ಟಗಿಲ್ಲದೇ ಮಕ್ಕಳ ಚಿತ್ರ ಇಟ್ಟು ವಲ್ಗರ್ ಚಾಟ್ ಮಾಡ್ತಾನೆ! ಇವನಿಗೇನು ಇಂದ್ರಿಯ ಶುದ್ಧತೆ ಬಗ್ಗೆ ಮಾತಾಡಕ್ಕೆ ಹಕ್ಕಿದೆ... ಈತ ಶೀಲಗೆಟ್ಟ ನಾಯಿ... ನಿಜಕ್ಕೂ ಇವನ ಹಳೆಯ ವಿದ್ಯಾರ್ಥಿಗಳು ಅಂತ ಹೇಳಕ್ಕೆ ನಮಗೆ ಅವಮಾನ ಆಗುತ್ತೆ' ಎಂದು ಈ ಪ್ರೊಫೆಸರ್ ಗೌಪ್ಯವಾಗಿ ಭಾಗಿಯಿದ್ದ ಚಾಟ್ ಥ್ರೆಡ್ಡುಗಳ ಸ್ಕ್ರೀನ್ ಶಾಟುಗಳ ಚಿತ್ರಗಳನ್ನು ಯಾರೋ ಗುಟ್ಟಾಗಿ ಲೀಕ್ ಮಾಡಿದ್ದನ್ನು ಶೇರ್ ಮಾಡಿ ಹಲುಬಿದರು.

ಕೆಲವೇ ತಿಂಗಳಲ್ಲಿ ಪ್ರಖರ ಲಿಬರಲ್ ರಾಕ್ ಸ್ಟಾರ್ ಆಗಿದ್ದ ನಾನು ಈಗ ಇಷ್ಟೆಲ್ಲ ಬಿರುದುಗಳಿಗೆ ಹೇಗೆ ಗುರಿಯಾದೆ ಅಂತ ಪ್ರೊಫೆಸರ್ ಗಡ್ಡ ಮೀಸೆ ಬೋಳಿಸಿಕೊಂಡು, ಟೋಪಿ ಹಾಕಿಕೊಂಡು ಒಂದು ಲಾಡ್ಜ್‌ನಿಂದ ಮತ್ತೊಂದು ಲಾಡ್ಜ್‌ಗೆ ಜೈಲಿಂದ ಪರಾರಿಯಾದ ಆರೋಪಿಯಂತೆ ಅಲೆಯುತ್ತಾ ಇದ್ದರು. ಮೊದಲಿನ ಚೈತನ್ಯ ಅವರಲ್ಲಿ ಈಗ ಕಿಂಚಿತ್ತೂ ಉಳಿದಿರಲಿಲ್ಲ. ಮಾತನಾಡಲು ಹೊರಟರೆ ಯಾರೋ ಅವರ ಎದೆಯ ಮೇಲೆ ಗುಂಡುಕಲ್ಲನ್ನು ದಬ್ಬಾಕಿದಂತೆ ಅನ್ನಿಸಿ, ಸರಿಯಾಗಿ ಸಂವಹನ ಮಾಡಲು ಮೇಷ್ಟ್ರು ಪರದಾಡುವ ಸ್ಥಿತಿ ಎದುರಾಯಿತು. ಮಗಳು ಕೂಡ ಇವರ ಜತೆ ಮಾತಾಡುವುದನ್ನೇ ಬಿಟ್ಟಿದ್ದಳು. ಕೆನಾಡದಲ್ಲಿದ್ದ ಮಗ, 'ಈಗ ಊರಿಗೆ ಬಂದರೆ ಮತ್ತೆ ವಾಪಸ್ಸಾಗಲು ವೀಸಾ ಸಿಗೋದು ಕಷ್ಟ, ಅದೂ ಅಲ್ಲದೆ ನಿನ್ನ ಈ ಗುಪ್ತ ಚೂಲಿನ ಬಗ್ಗೆ ನನಗೆ ಗೊತ್ತಿರಲಿಲ್ಲ. That is your cross to bear ನಮ್ಮ ಬದುಕನ್ನು ಹೀಗೆ ನೀನು ನಾಶ ಮಾಡಕ್ಕೆ ನಿಂಗೇನು ಹಕ್ಕಿದೆ?' ಅಂತ ಲಾ ಪಾಯಿಂಟ್ ಹಾಕಿದ್ದ. ಹೆಂಡತಿ ತೀವ್ರ depression ಇಂದ ತಾನು ಈ ವಿಕೃತ ಮೃಗದಿಂದ ಬಳಲಿದ್ದೇನೆ ಎಂದು ಎಲ್ಲ ಕಡೆ ಪೋಸ್ಟ್ ಹಾಕುತ್ತಾ ಇದ್ದಳು. ಆಕೆ ಈಗಾಗಲೇ ಡಿವೋರ್ಸಿಗೂ ಅಪ್ಲೈ ಮಾಡಿಯಾಗಿತ್ತು. ಕೈಗೆ ಬರುತ್ತಿದ್ದ ಪೆನ್ಷನ್ ಹಣ ಈ ಕೇಸು ದಾಖಲಾದ ಮೇಲೆ ಫ್ರೀಜ್ ಆದ ಹಾಗಿತ್ತು. 'ಬೇರೆ ಬೇರೆ ದೊಡ್ಡ ಕ್ರಿಮಿನಲ್ಲುಗಳು ಎಂಥಾ ದುಷ್ಟ ಕೃತ್ಯ ಎಸಗಿದರೂ ಅವರ ಆಸ್ತಿ ಮುಟ್ಟುಗೋಲು ಹಾಕದೇ, ನನ್ನಂತ ನ್ಯಾಯಯುತವಾಗಿ ಬದುಕಿದ್ದ ಪ್ರಜೆಯ ಮೇಲೆ ಈ ರೀತಿ ಪಿತೂರಿ ಏಕೆ ಮಾಡುತ್ತಾ ಇದ್ದೀರಿ...' ಅಂತ ಏನೋ ಪೋಸ್ಟ್ ಮಾಡಲು ಶ್ರೀಯುತರು ಹವಣಿಸಿದ್ದರೂ, ಅವರ ಟ್ರಿಬಲ್ ಎಕ್ಸ್ ಖಾತೆಯನ್ನು ಈಗಾಗಲೇ ಕಂಪೆನಿಯ ಹಿತ ದೃಷ್ಟಿಗೆಂದು ಬ್ಲಾಕ್ ಮಾಡಲಾಗಿತ್ತು. ಹಾಗೇ ಇವರ ಬಾಯಲ್ಲಿ ಪಾಠ ಕೇಳಿ, ಇವರ ಬಳಗಕ್ಕೆಲ್ಲ ಸೇರದೆ ಮುಂದೆ ಬದುಕಲ್ಲಿ ಸರಕಾರಿ ಕೆಲಸ ಸಿಗದೇ ಸೋತು, ಅದೂ ಇದೂ ಕಸುಬು ಮಾಡುತ್ತಾ ಜೀವನ ತಳ್ಳುತ್ತಾ ಇದ್ದ ಕೆಲ ಮುದಿ ಹಳೆ ವಿದ್ಯಾರ್ಥಿಗಳು ತಮ್ಮ ನೆನಪುಗಳನ್ನು- 'ಈ ಮನುಷ್ಯ ಮೆಂಟಲ್ಲು ಅನ್ನೋದರಲ್ಲಿ ಡೌಟೇ ಇಲ್ಲ... ಈ ವಯ್ಯನಿಗೆ ಮಾತ್ರ ವಯ್ಯಾರದ ಇಂಗ್ಲಿಷ್ ಬರೋದು ಅನ್ನೋ ದುರಹಂಕಾರದಲ್ಲಿ 'why don't you go hang yourself...', 'your English is as delicious as rat poison', 'you know you ought to be shot dead', 'ನಡುಹಗಲಲ್ಲಿ ಮೂರು ದಾರಿ ಸೇರೋ ಕಡೆ ತಲೆ ಹೊಡೆದು ಸಾಯಿಸ್ಬೇಕು ನಿನ್ನ' ಅಂತ ಕ್ಲಾಸಲ್ಲಿ ನಮ್ಮನ್ನೆಲ್ಲ ತಮಾಷೆ ನೆಪ ಹೇಳಿ ಹೀಯಾಳಿಸುತ್ತಿದ್ದ... ಎಂದು ಮೆಲುಕು ಹಾಕಿದರು.